ಬೆಂಗಳೂರು ಡಿಸ್ಟ್ರಿಕ್ಟ್.

ಅಬ್ಸ್ಟ್ರಾಕ್ಟ್.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಕೇರಿದ ಜೋಡಿ ಶ್ಯಾನಸ್ಪನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜುಲೈ ಮಾಹೆ ೨ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲು ಬಗ್ಯೆ 1907ನೆ ಇಸವಿ ಜೂನ್ ಮಾಹೆ 20ನೆ ಮತ್ತು 25ನೆ ನಂಬರು ಮೈಸೂರು ಗೆಜೆಟ್ಟಿನ 11ನೆ ಭಾಗದ 297ನೆ ನಂಬರು ಪೇಜು ನೋಡತಕ್ಕದ್ದು.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಕೇರಿದ ಜೋಡಿ ನರಗನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜುಲೈ ಮಾಹೆ 12ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲು ಬಗ್ಯೆ 1907ನೆ ಇಸವಿ ಜೂನ್ ಮಾಹೆ ೨೫ನೆ ಮತ್ತು 25ನೆ ನಂಬರು ಮೈಸೂರು ಗೆಜೆಟ್ಟಿನ 11ನೆ ಭಾಗದ 296ನೆ ನಂಬರು ಪೇಜು ನೋಡತಕ್ಕದ್ದು.

ಹೆಚ್. ಹೆಚ್. ಸ್ಮಾರ್ಕ್ಸ್,
ಡೆಪ್ಯೂಟಿ ಕಮಿಷನರ್.

ಹಿಸ್ತಿಹಾರ್.

ತಾರೀಖು 10ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, — ಚನ್ನಪಟ್ಟಣ ತಾಲ್ಲೂಕು ಮಳೂರು ಹೋಬಳಿ ಮಳೂರು ಪಟ್ಟಣದ ದಾಖಲೆ ಭೈರಾಪಟ್ಟಣದಲ್ಲಿರುವ ಕುಂಟಲಿಂಗೇಗೌಡನೆಂಬವನು ಆ ಗ್ರಾಮದ ತನ್ನ ಹಿಡುವಳಿ ಸರ್ವೆ 602ನೆ ನಂಬರ್ ಜಮೀನಲ್ಲಿ ಅಗಿಯುವ ವ್ಯಾಳೆ ಈ ಕೆಳಗೆ ಕಂಡ ಸ್ವತ್ತುಗಳು ಸಿಕ್ಕಿರುವದಾಗಿ ಹಿಡುವಳಿದಾರ ತಾಲ್ಲೂಕಿಗೆ ಹಾಜರ್ಮಾಡಿರುತ್ತಾನೆ ಇದರ ಹಕ್ಕು ಬಾಧ್ಯತೆ ಉಳ್ಳವರು 1907ನೆ ಡಿಸೆಂಬರ್ ಮಾಹೆ ಆಖೈರು ಒಳಗಾಗಿ ಬೆಂಗಳೂರು ಡಿಸ್ಟ್ರಿಕ್ಟ್ ಕ್ಯೂಸ್ಟೇಟ್ ಸಬ್ ಡಿವೀಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಲ್ಲಿ ಹಾಜರಾಗಿ ತಮ್ಮ ಹಕ್ಕು ಸ್ಥಿರಪಡಿಸಿಕೊಟ್ಟು ಸದರಿ ಮಾಲು ಪಡಿಯಬಹುದು. ತಪ್ಪಿದಲ್ಲಿ ಸದರಿ ಸ್ವತ್ತನ್ನು ಮೇಲ್ಕಂಡ ಕುಂಟಲಿಂಗೇ ಗೌಡನಿಗೆ ಪಾವತಿ ಮಾಡಲ್ಪಡುತ್ತೆ. ನಂತರ ಬರುವ ತಕರಾರುಗಳು ಅಂಗೀಕರಿಲ್ಪಡುವದಿಲ್ಲ.

ಸ್ವತ್ತುಗಳ ತಪಶೀಲ್.

		ಅಂದಾಜ. ರೂ.	ಆ.	ಪೈ.
1.	ಲಕ್ಷ್ಮಿದೇವಿ ತಾಳಿ ಆರು ಕಾಸಿನ ಅಗಲಾ, ಮುತ್ತು ಸುತ್ತಿಕೊಂಡು ಇರತಕ್ಕದ್ದು	0	4	0
2.	ಸಾಧಾರಣ ಗುಂಡು ತಾಳಿ ಮೇಲೆ ಗುಂಡು ಇರತಕ್ಕದ್ದು 1 ...	0	4	0
3.	ಭಂಗಾರದ ಹಣಗಳು 8	2	5	4
4.	ಕಿವಿಗೆ ಹಾಕಿಕೊಳ್ಳುವ ಎರಡು ಬೆಳ್ಳಿ ಕೊಂಡಿಗಳು	0	1	0
5	...ಚಿನ್ನದ ಸಂಣ ಗುಂಡು ತೊಗರಿಕಾಳು ಪ್ರಮಾಣ ಇರತಕ್ಕದ್ದು 1 ...	0	1	0
6.	ಬಂಣ ಕೆಟ್ಟುಹೋದ ಹವಳ 1.	0	0	1
7.	ಬಿಳಿ ಕಲ್ಲು ಮಣಿ 1.	0	0	1
	ಜುಮ್ಲಾ ...	2	15	6

ಟಿ. ರಾಯುಲುಜೆಟ್ಟಿ,
ಫಾರ್ ಡೆಪ್ಯೂಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಸ್ ೧೯೦೭ನೆ ಇಸವಿ ಏಪ್ರಿಲ್ ತಾರೀಖು 30ನ ವಂಗಳವಾರ ನಡತ ಡಿಸ್ಟ್ರಿಕ್ಟ್ ಬೋರ್ಡ್ ವಿಾಟಿಂಗ್ ನಡವಳಿಕೆಗಳು.

ಮೆ|| ಡಿ. ದೇವರಾಜ ಅರಸಿನವರು, (ಪ್ರೆಸಿಡೆಂಟರು) ಸರಕ್ಯೂಟಿನಲ್ಲಿರುತ್ತಾರೆ.

ಉದ್ಯೋಗ ಪ್ರಯುಕ್ತ ಮೆಂಬರುಗಳು.

ಹಾಜರು.

2. ಮೆ|| ಎಂ. ಲಕ್ಷ್ಮಣಶಾಸ್ತ್ರಿಗಳು, ಟ್ರೆಜರಿ ಅಸಿಸ್ಟೆಂಟ್ ಕಮಿಷನರು ಮತ್ತು ವೈಸ್‌ಪ್ರೆಸಿಡೆಂಟರು (ಅಗ್ರಾಸನವನ್ನು ವಹಿಸಿದ್ದರು).

3. ,, ಹೆಚ್. ಜೆ. ವೊಲ್ಲಾಯಿ ಸಾಹೇಬರು, ಎಗ್ಜಿಕ್ಯೂಟಿವ್ ಇಂಜಿನಿಯರು.

4. ,, ಹೆಚ್. ಎ. ವೆಂಕಟರಮಣಯ್ಯನವರು, ಸ್ಕೂಲುಗಳ ಡೆಪ್ಯೂಟಿ ಇನ್‌ಸ್ಪೆಕ್ಟರು.

ಗೈರ್ ಹಾಜರು.

5. ಮೆ॥ ಕೆ. ಎಂ. ಅಪ್ಪಯ್ಯನವರು, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
6. ,, ಕೆ. ವೈಲಾರಿ ರಾಯರು, ಡಿವಿಜನಲ್ ಅಸಿಸ್ಟೆಂಟ್ ಕಮಿಷನರವರು.

ಉದ್ಯೋಗ ಪ್ರಯುಕ್ತ ವೆಲ್ಲದ ಮೆಂಬರುಗಳು.

7. ಮೆ॥ ಬಿ. ರಂಗಣ್ಣನವರು.
8. ,, ಪಿ. ರಂಗಂಣನವರು.
9. ,, ದಾವುದ್ ಸಾಹೇಬರು.
10. ,, ಅತ್ತಿಗನಾಳು ಶಾಮಂಣನವರು.
11. ,, ಪಿ. ಶ್ರೀನಿವಾಸರಾಯರು.
12. ,, ಟಿ. ನರಸಿಂಹೈಯ್ಯಂಗಾರು.
13. ,, ಎಸ್. ಪರ್ವತಪ್ಪನವರು.
14. ,, ಕೆ. ಗೋವಿಂದಪ್ಪನವರು.
15. ,, ಎಚ್. ಪಿಲ್ಲಿಂಗರ್ಟ್ ಸಾಹೇಬರು.
16. ,, ಎ. ಅಬ್ದುಲ್ ಖಾದರ್ ಸಾಹೇಬರು.
17. ,, ಎ. ಚಂದ್ರೆಗೌಡರು.
18. ,, ಟಿ. ಶ್ರೀನಿವಾಸರಾಯರು.
19. ,, ಜೆ. ಗಣೇಶರಾಯರು.
20. ,, ವೈ. ಶಾಂತಪ್ಪ ಶೆಟ್ಟರು.
21. ,, ಎಂ. ರಾಮಚಂದ್ರರಾಯರು.
22. ,, ಹಾಲ್‌ಗಾರ್ ವೆಂಕಟಸುಬ್ಬಯ್ಯನವರು.
23. ,, ಚನ್ನಕೇಶವರಾಯರು.
24. ಸ್ಥಳ ಖಾಲೀ.
25. ಸ್ಥಳ ಖಾಲೀ.

1. ಕಂಟ್ರೋಲರವರಿಂದ ತನಿಖೆಯಾಗಿ ಬಂದ ಡಿಸೆಂಬರು ಆಖೈರು ವರಿಗಿನ ಡಿಸ್ಟ್ರಿಕ್ಟ್ ಫಂಡು ಜಮಾಖರ್ಚಿನ ಲೆಖ್ಖಗಳನ್ನು ಓದಿ ರಿಕಾರ್ಡು ಮಾಡಲಾಯಿತು.

	ರೂ.	ಆ.	ಪೈ.
ಸ್ಯ1906ನೆ ಜುಲೈ 1ರಲ್ಲು ಶಿಲ್ಕು	2,458	10	6
ಸ್ಯ1906ನೆ ಡಿಸೆಂಬರ್ ಆಖೈರ್ ವರಿಗೆ ಜಮಾ	6,216	3	0
	8,674	13	6
ಡಿಟೋ ಡಿಟೋ ಖರ್ಚು	24,079	4	10
ಬಾಕಿ	15,404	7	4

2. ಚಿಕ್ಕಮಗಳೂರು, ತೀರ್ಥಹಳ್ಳಿ ಮತ್ತು ಬೀರೂರು ವೈದ್ಯಶಾಲೆಗಳಲ್ಲಿ ಸ್ಯ1906ನೆ ಇಸವಿ ಜುಲೈ 1ರ ಲಾಗಾಯಿತು ಫೆಬ್ರವರಿ ಆಖೈರು ವರಿಗೆ ಚಿಕಿತ್ಸೆ ಹೊಂದಿದ ರೋಗಿಗಳ ಸಂಖ್ಯೆಯನ್ನು ತೋರಿಸುವ ಲೆಖ್ಖಗಳನ್ನು ಓದಿ ರಿಕಾರ್ಡು ಮಾಡಲಾಯಿತು. ಚಿಕಿತ್ಸೆ ಹೊಂದಿದವರ ಸಂಖ್ಯೆಗಳು ಪರವರ 9,081, 10,711 ಮತ್ತು 6,645, ಗತ ಸಾಲಿನ ಇದೇ ಮಾಹೆಗಳಲ್ಲಿ ಗುಣ ಹೊಂದಿದವರ ಸಂಖ್ಯೆಗಳು 11,633, 9,357, 3,305 ಆಗಿದ್ದವು.

3. ಈ ಕೆಳಗೆ ನಮೂದಾಗುವ ಗ್ರಾರ್ನಮೆಂಟ್ ಆರ್ಡರುಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(1). ಮದ್ದಗಿರಿ ಮತ್ತು ಸಿರಾ ತಾಲ್ಲೂಕುಗಳಲ್ಲಿ ಕೆಲವು ಜಮೀನುಗಳನ್ನು ಗ್ರಾಮಠಾಣೆಗೋಸ್ಕರ ತೆಗದುಕೊಂಡಿರುವದನ್ನು ಮಂಜೂರು ಮಾಡಿರುತ್ತೆಂತಲೂ, ಗ್ರಾಮ ನಿವೇಶನದ ಬಡಾವಣೆಗೆ ಅವಶ್ಯಕವಿರುವ ಜಮೀನುಗಳನ್ನು ಹೆಬ್ಬ್ಯಟ್ ಅಮಲ್ದಾರರು ಅಥವಾ ಅಮಲ್ದಾರರುಗಳು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರ ಅಭಿಪ್ರಾಯಾನುಸಾರವಾಗಿ ಚಾನಾಯಿಸ ಬೇಕೆಂತಲೂ ಈ ರೀತಿ ಇವರು ಚಾನಾಯಿಸಿದ್ದನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಒಪ್ಪಬೇಕೆಂತಲೂ ಸಹತಲ್ಪಿದ 12—3—07ನೆ ನಂಬರ್ 8144-52—L. B. (124—0 i)-4ನೆ ನಂಬರು ಗ್ರಾರ್ನಮೆಂಟ್ ಆರ್ಡರು.

(2). ಸ್ಯ1905-06ನೆ ಸಾಲಿನ ಡಿಸ್ಟ್ರಿಕ್ಟ್ ಫಂಡ್ ಜಮಾಬಂದಿ ವಸೂಲು ಬಾಕಿ ತಖ್ತೆಯನ್ನು ಪರಿಶೀಲಿಸಿದ ಬಗ್ಗೆ ಮತ್ತು ಡಿಸ್ಟ್ರಿಕ್ಟ್ ಫಂಡು ಪ್ರತಿ ಬಂದು ಐಟಂನಿದಲೂ ಹುಟ್ಟುವಳಿ ಆಗತಕ್ಕ ಮೊಬಲಗನ್ನು ಸದರಿ ಲೆಕ್ಕದಲ್ಲಿ ತೋರಿಸಬೇಕೆಂತಲೂ ಸಹತಲ್ಪಿದ 6—3 - 07ನೆ ನಂಬರ್ 7637-45—L. B. (151-03)-32ನೆ ನಂಬರ್ ಗ್ರಾರ್ನಮೆಂಟ್ ಆರ್ಡರು.

(3). ಪ್ರತ್ಯೇಕವಾಗಿ ನಿವಡಾಯಿಸಿರತಕ್ಕ ಸ್ಥಳಗಳಲ್ಲಿಯೇ ಗೊಬ್ಬರ ಜವಾನಣಿ ಆಗುವಂತೆ ಸ್ಥಳೀಯ ಅಧಿಕಾರಿಗಳು ನಿಗಾ ಇಡಿಸಬೇಕೆಂತ ತಲ್ಪಿದ 2—3—07ನೆ ಮುಕ್ಕಾಂ 7391-9—L. B. (84-06)-6ನೆ ನಂಬರು ಗಾರ್ನಮೆಂಟ್ ಆರ್ಡರು.

(4). ಪಬ್ಲಿಕ್ ವರ್ಕ್ಸ್ ಇಲಾಖೆಯ ಆಫಿಸರುಗಳು ಮ್ಯುನಿಸಿಪಲ್ ಮತ್ತು ತಾಲ್ಲೂಕ್ ಬೋರ್ಡ್ ಮೆಂಬರುಗಳಿಗೆ ಯಾವದಾದರೂ ವಿಷಯಂಗಿನಲ್ಲಿ ಅವರ ಹಾಜರಾತಿಯು ಅವಶ್ಯಕವಾಗಿದ್ದು ಅಥವಾ ಅವರಿಂದ ನಡಿಯಬೇಕಾದ ಕೆಲಸವೇನಾದರೂ ಮುಖ್ಯವಾಗಿದ್ದಲ್ಲಿ ಅವರುಗಳಿಗೆ ವಿಷಯಂಗ ನಡಿಯತಕ್ಕ ತಾರೀಖಿನ್ನು ಕುರಿತು 2 ವಾರ ಮುಂಚೆ ನೋಟೀಸುಗಳನ್ನು ಸದರಿ ಬೋರ್ಡುಗಳ ವೈಸ್ ಪ್ರೆಸಿಡೆಂಟರುಗಳು ಅವರುಗಳಿಗೆ ಕೊಡಬೇಕೆಂತ ಡಿಪ್ಯೂಟಿ ಕಮಿಷರ್ರರೂ ಸಂಬಂಧಪಟ್ಟ ವೈಸ್ ಪ್ರೆಸಿಡೆಂಟರುಗಳಿಗೆ ತಿಳುವಳಿಕೆ ಕೊಡಬೇಕೆಂತ ತಲಿಪದ 6—3—07ನೆ ಮುಕ್ಕಾಂ 7675-83—M. L. (211-06)-2ನೆ ನಂಬರು ಗಾರ್ನಮೆಂಟ್ ಆರ್ಡರು.

(5). ಕಾಮಗಾರಿಗಳನ್ನು ಚುನಾಯಿಸಿ ಬಡ್ಜೆಟ್ಟಿನಲ್ಲಿ ಅವುಗಳ ಹೆಸರುಗಳನ್ನು ದಾಖಲ್ಮಾಡುವದಕ್ಕೆ ತತ್ಪೂರ್ವ ಅಂದಾಜಾಗಳನ್ನು ತಯಾರ್ಮಾಡಿಸಿಟ್ಟಿರಬೇಕೆಂತ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರಿಗೆ ತಿಳಿಸಬೇಕೆಂತ ತಲ್ಪಿದ 12—3—07ನೆ ಮುಕ್ಕಾಂ 8030-7—L. B. 289-06-2ನೆ ನಂಬರು ಗಾರ್ನಮೆಂಟ್ ಆರ್ಡರು.

(6). ಯೂನಿರ್ಯಗಳಲ್ಲಿ ಆಗಂತುಕ ವ್ಯಾಪಾರಿಗಳಿಗೆ ತೆರಿಗೆ ಹಾಕುವದನ್ನ ತಪ್ಪಿಸಬೇಕೆಂತ ತಲ್ಪಿದ 9-3-07ನೆ ಮುಕ್ಕಾಂ 7890-8—L. B. (100—05)-1ನೆ ನಂಬರು ಗಾರ್ನಮೆಂಟ್ ಆರ್ಡರು.

(7). ಬೆಂಗಳೂರು ಮತ್ತು ಶಿವಮೊಗ್ಗಾ ಲೋಕಲ್ ಬೋರ್ಡುಗಳ ಮೆಂಬರುಗಳ ಕೆಲವು ಟ್ರಾವಲಿಂಗ್ ಅಲೋರ್ಯನ್ಸ್ ಬಿಲ್ಲುಗಳನ್ನು 2 ವರ್ಷಗಳ ಸುಸ್ತಿಯಿಂದ ಕಳುಹಿಸಿದ್ದನ್ನು ಮಂಜೂರು ಮಾಡಿರುತ್ತೆಂತ ತಲ್ಪಿದ 12-3-07ನೆ ಮುಕ್ಕಾಂ 8068-76-L. B. (253-06)-2ನೆ ನಂಬರು ಗಾರ್ನಮೆಂಟ್ ಆರ್ಡರು.

(8). ಕೆಲವು ಯೂನಿರ್ಯಗಳನ್ನು ಸ್ಥಾಪಿಸುವದನ್ನು ಮಂಜೂರು ಮಾಡಿರುತ್ತೆಂತಲೂ 300 ಮನೆಗಳು ಅಥವಾ 1,000 ಪ್ರಜಾ ಸಂಖೆ ಇರತಕ್ಕ ಪ್ರತಿ ಬಂದು.

(9). ತಮ್ಮ ಗಾಮಗಳ ಆರೋಗ್ಯಾಭಿವೃದ್ಧಿ ಉಂಟಾಗುವಂತೆ ಗ್ರಾಮವನ್ನು ಶುಚಿಮಾಗಿಟ್ಟುಕೊಂಡಿರತಕ್ಕ ಪಟೇಲರುಗಳಿಗೆ ಬಹುಮಾನಗಳನ್ನು ಕೊಡುವದನ್ನು ಮಂಜೂರು ಮಾಡಿರುತ್ತೆಂತ ತಲ್ಪಿದ 6—3—07ನೆ ಮುಕ್ಕಾಂ 7626-36-L. B. (275—03)-13ನೆ ನಂಬರು ಗಾರ್ನಮೆಂಟ್ ಆರ್ಡರು.

(10). ಗಾರ್ನಮೆಂಟಿಗೆ ಕಳುಹಿಸತಕ್ಕ ಕಾಂಗಾರಿಗಳ ಪ್ರೊಗ್ರೆಸ್ ತೋರಿಸತಕ್ಕ ಸ್ಟೇಟ್‌ಮೆಂಟುಗಳಲ್ಲಿ ಗತ ಸಾಲಿನಲ್ಲಿ ಪೂರೈಸದೆ ಬಾಕಿ ನಿಂತ ಕಾಮಗಾರಿಗಳಿಗೂ ಚಾಲ್ತಿ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳಿಗೂ ಯೇನೂ ವ್ಯತ್ಯಾಸ ಮಾಡಕೂಡದೆಂತ ತಲ್ಪಿದ 6—3—07ನೆ ಮುಕ್ಕಾಂ 7614-21—L. B. (93—06)-7ನೆ ನಂಬರ್ ಗಾರ್ನಮೆಂಟ್ ಆರ್ಡರು.

(11). ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಕಛೇರಿಗಳಲ್ಲಿಯೂ ಸಹಾ ಲೋಕಲ್ ಫಂಡ್ ಬಾಬಿನ ಕೆಲಸಕ್ಕೋಸ್ಕರ 15 ರೂಪಾಯಿ ತಲಬಿನ ಬುಪ್ಪು ಗುಮಾಸ್ತೆಯನ್ನು ಮಂಜೂರು ಮಾಡಿರುತ್ತೆಂತ ತಲಪಿದ 16—3—07ನೆ ಮುಕ್ಕಾಂ 8333-44—L. B. (422-05)—12ನೆ ನಂಬರ್ ಗಾರ್ನಮೆಂಟ್ ಆರ್ಡರು.

4. ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್‌ಗಳಲ್ಲಿ ಪ್ರೆಸಿಡೆಂಟರವರು ಅಮಲ್ದಾರರುಗಳು ಮತ್ತು ಡಿಪ್ಯೂಟಿ ಅಮಲ್ದಾರರುಗಳ ಹಾಜರಿಯನ್ನು ಉಂಟುಮಾಡಿಕೊಳ್ಳಲು ಅಧಿಕಾರವಿಲ್ಲವರಾಗಿದ್ದಾರೆಂತ ತಲ್ಪಿದ 6—3—07ನೆ ಮುಕ್ಕಾಂ 7791-800—L. B. (170-06)-1ನೆ ನಂಬರ್ ಗಾರ್ನಮೆಂಟ್ ಆರ್ಡರನ್ನು ಬೋರ್ಡಿನಲ್ಲಿ ಓದಲಾಗಿ ಹಾಜರಿದ್ದ ಮೆಂಬರುಗಳು ಅಮಲ್ದಾರರುಗಳು ಬೋರ್ಡು ಮೀಟಿಂಗುಗಳಿಗೆ ಮೆಂಬರುಗಳಾಗತಕ್ಕದ್ದು ಬಳ್ಳಿಯದೆಂತಲೂ ಮುಂದಿನ ಮೀಟಿಂಗಿನಲ್ಲಿ ಈ ವಿಷಯವನ್ನು ಚರ್ಚಿಸಲು ಜಾಸ್ತಿ ಮೆಂಬರುಗಳು ಹಾಜರಾಗಬಹುದಾದ ಪ್ರಯುಕ್ತ ಈ ಅಂಶವನ್ನು ಮುಂದಿನ ಮೀಟಿಂಗಿನಲ್ಲಿ ಇಡಬೇಕೆಂತ ತೀರ್ಮಾನಿಸಲಾಯಿತು.

5. ಲೋಕಲ್ ಫಂಡು ಆಸ್ಪತ್ರೆಗಳಲ್ಲಿ ಉತ್ತಮ ವರ್ಗದ ಸ್ತ್ರೀಯರುಗಳು ಔಷಧಗಳನ್ನು ತೆಗದುಕ್ಕೊಳ್ಳುವವರಿಗೂ ಕಾದುಕೊಂಡು ಇರುವದಕ್ಕೋಸ್ಕರ ಬಂದು ಕೊಠಡಿಯನ್ನು ಕಟ್ಟಿಸಬೇಕೆಂತ ಬಂದ ಸ್ಯ 1905ನೆ ಇಸವಿಯ 211ನೆ ಪ್ರಸ್ತಾಪವನ್ನು ರಿಕಾರ್ಡು ಮಾಡಿರುತ್ತೆಂತ ತಲಪಿದ 18—3—07ನೆ ಮುಕ್ಕಾಂ 8469-79—Med. (243-05)-11ನೆ ಗವರ್ನಮೆಂಟ್ ಆರ್ಡರು ಓದಲಾಗಿ ಪ್ರತಿ ಬಂದು ಆಸ್ಪತ್ರೆಯಲ್ಲಿಯೂ ಒಂದೊಂದು ಕೊಠಡಿ ಕಟ್ಟಿಸಬೇಕಾದ್ದು ಅವಶ್ಯಕವೆಂತಲೂ ಹಣ ವದಗಿದಹಾಗೆ ಈ ಕೆಲಸ ಮಾಡಿಸಬೇಕೆಂತಲೂ ಸಹ ಬೋರ್ಡಿನವರು ಏಕಮತ್ಯದಿಂದ ಅಭಿಪ್ರಾಯಪಟ್ಟರುತ್ತಾರೆ.

6. ಸ್ಯ 11—1—07ನೆ ಮುಕ್ಕಾಂ 1265-72—L. B. (173-06)-1ನೆ ಗವರ್ನಮೆಂಟ್ ಆರ್ಡರಿನ ವಿಚಾರವಾಗಿ ತಾಲ್ಲೂಕು ಬೋರ್ಡು ಮೆಂಬರುಗಳು ಮೀಟಿಂಗ್‌ಗಳಿಗೆ ಹಾಜರಾದ ಬಗ್ಗೆ ಮೈಲಿ ಒಂದರ 2 ಆಣೆಯಂತೆಯೂ, ಮತ್ತು ರೈಲಿನಲ್ಲಿ ಪ್ರಯಾಣ ಮಾಡಿದರೆ ಮೊದನೇ ತರಗತಿಯ ಛಾರ್ಜನ್ನು, ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು ಪ್ರಯಾಣ ಮಾಡಿದ ಪ್ರತಿ ಬಂದು ಮೈಲಿಗೂ ನಾಲ್ಕಾಣೆಯಂತೆಯೂ ರೈಲಿನಲ್ಲಿ ಪ್ರಯಾಣ ಮಾಡಿದ ಬಗ್ಗೆ ಎರಡನೆ ತರಗತಿಗೆ ಆಗತಕ್ಕ ದುಗಣಿ ಛಾರ್ಜನ್ನು ಕೊಡುತ್ತಲಿರುವದನ್ನು 17—6—05ರಲ್ಲು ನಡದ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನಲ್ಲಿ ಒಪ್ಪಿರುತ್ತೆಂತಲೂ ಅದೇ ರೀತಿಯ್ದಲ್ಲಿ ಕಂಟ್ರೋಲರವರು ಬಿಲ್ಲು ತನಿಖೆ ಮಾಡಿ ಒಪ್ಪಿಕ್ಕೊಂಡಿರುವಂತೆಯೂ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರು ರಿಪೋರ್ಟು ಮಾಡಿರುವದನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಆಲೋಚಿಸತಕ್ಕ ಬಗ್ಗೆ ಮೂಲಪುಟಿಸಿ ಬಂದ 6—3—07ನೆ ಮುಕ್ಕಾಂ 7600-9—L. B. (173-06)-3ನೆ ಗವರ್ನಮೆಂಟು ಆರ್ಡರು ಓದಲಾಗಿ ಮುಂದಿನ ವಿಷಯಂಗಿನಲ್ಲಿ ಹೆಚ್ಚು ಸಂಖ್ಯೆ ಮೆಂಬರುಗಳು ಹಾಜರಾಗುಹುದಾದ್ದರಿಂದ ಈ ವಿಚಾರವನ್ನು ಮುಂದಿನ ವಿಷಯಂಗಿನಲ್ಲಿ ಇಡಬೇಕೆಂತ ತೀರ್ಮಾನಿಸಲಾಯಿತು.

7. ಬೀರೂರು ಅಜ್ಜಂಪುರದ ರಸ್ತೆಯನ್ನು ಉತ್ತಮ ಸ್ಥಿತಿಗೆ ತರತಕ್ಕ ಬಗ್ಗೆ ರೂ. 472ಕ್ಕೆ ತಯಾರಾಗಿ ಪ್ರೆಸಿಡೆಂಟರವರ ಅಡ್ಡ ರುಜುವಿಗೋಸ್ಕರ ಮೂಲಪೂಫಿಸಿ ಬಂದ ಕಡೂರು ಡಿವಿಜ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ 13—3—07ನೆ ಮಾರ್ಕ್ಕಂ 68ನೆ ಡಾಕೆಟ್ ಓದಲಾಗಿ ಈ ರಸ್ತೆಯು ಅತಿ ಜರೂರಾಗಿ ದುರಸ್ತಿ ಆಗತಕ್ಕದ್ದೆಂತ ತಿಳಿಯಬರೋಣದರಿಂದಲೂ ಇತರ ರಸ್ತೆ ಕೆಲಸಗಳಿಗೋಸ್ಕರ ಮಂಜೂರಾಗಿರುವ ಹಣಗಳ ಪೈಕಿ ಬಾಬು ಹೊರಳಿ ಮೂಲಕ ಕೆಲಸ ನಡಿಸಲು ಅನುಕೂಲವಿಲ್ಲವೆಂತ ಎಗ್ಸಿಕ್ಯೂಟಿವ್ ಇಂಜಿನಿಯರು ಹೇಳಿಯವದ್ದರಿಂದಲೂ ಈ ಕಾಮಗಾರಿಗೆ ಅವಶ್ಯಕವಿರುವ ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡ್ಸಿನಲ್ಲಿ ಉಳಿಯತಕ್ಕ ಆಜ್ಞೆರು ಶಿಲ್ಕಿನ ಪೈಕಿ ಮಂಜೂರು ಮಾಡತಕ್ಕ ಬಗ್ಗೆ ಗವರ್ನಮೆಂಟಿಗೆ ಬರಸಬೇಕಾಗಿ ತೀರ್ಮಾನಿಸಲಾಯಿತು.

8. ಬಾಬಾಬುಡೆಗಿರಿಯ ರಸ್ತೆಯ ಸ್ಪೆಷಲ್ ರಿಪೇರಿಗಾಗಿ ತಯಾರಾದ 2,932 ರೂಪಾಯಿಗಳ ಅಂದಾಜುವನ್ನು ಪ್ರೆಸಿಡೆಂಟರವರ ಅಡ್ಡ ರುಜುವಿಗಾಗಿ ಮೂಲಪೂಫಿಸಿ ಸದರಿ ಕಾಮಗಾರಿಗೆ ಅವಶ್ಯಕವಿರುವ ಹಣ ಸಹ ಪಬ್ಲಿಕ್ ವರ್ಕ್ಸ್ ಇಲಾಖೆಗೆ ವರ್ಗಾಯಿಸ ಬೇಕೆಂತ ಸಹ ಕಡೂರು ಡಿವಿಜ್ ಎಗ್ಸಿಕ್ಯೂಟಿವ್ ಇಂಜಿನಿಯರವರ 11—3—07ನೆ ಮಾರ್ಕ್ಕಂ 62ನೆ ನಂಬರು ಡಾಕೆಟ್ ಓದಲಾಗಿ ಇತರ ರಸ್ತೆ ಕಾಮಗಾರಿಗಳಿಗೆ ವದಗಿಸಿರುವ ಹಣಗಳ ಪೈಕಿ ಬಾಬು ಹೊರಳಿ ಮಾಡಿಕೊಂಡು ಈ ಕೆಲಸ ನಡಿಸುವದಕ್ಕೆ ಅನುಕೂಲವಿಲ್ಲದ್ದರಿಂದ ಈ ಕೆಲಸವನ್ನು ಮುಂದಿನ ಸಾಲಿನವರಿಗೆ ನಿಲ್ಲಿಸಬೇಕಾಗಿ ತೀರ್ಮಾನಿಸಲಾಯಿತು.

9. ತರೀಕೆರೆಯಿಂದ ದೊಡ್ಡಕೆರೆ ಮಾರ್ಗವಾಗಿ ಹಾದೀಕೆರೆಗೆ ಬಂದು ರಸ್ತೆ ಮಾಡಿಸಿಕೊಡಬೇಕೆಂತ ಬಂದ ದಸರಾ ಪ್ರಜಾಪ್ರತಿನಿಧಿ ಸಭೆಯ 430ನೆ ಪ್ರಸ್ತಾಪವನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಆಲೋಚನೆ ಬಗ್ಗೆ ಮೂಲಪೂಫಿಸಿ ಬಂದ 11—1—07ನೆ ಮಾರ್ಕ್ಕಂ 6326—L. F. (211-06)-1ನೆ ನಂಬರು ಸಕ್ರಿಟೆರಿಯವರ ಡಾಕೆಟ್ ಮತ್ತು ಇದೇ ವಿಚಾರವಾಗಿ 9—3—07ನೆ ಮಾರ್ಕ್ಕಂ ತರೀಕೆರೆ ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಸಹ ಓದಲಾಗಿ ಹಣವಿಲ್ಲದ್ದರ ದೆಸೆಯಿಂದ ಇದಕ್ಕಿಂತಲೂ ಜರೂರಾತಿಯಾಗಿಯೂ ಮುಖ್ಯವಾಗಿಯೂ ಇರತಕ್ಕ ಕೆಲಸಗಳನ್ನೆಲ್ಲಾ ನಿಲ್ಲಿಸಿರೋಣದಿಂದ ಹಣ ವದಗಿದಾಗ್ಯೆ ಈ ವಿಚಾರವನ್ನು ಯೋಚಿಸಬಹುದೆಂತ ತೀರ್ಮಾನಿಸಲಾಯಿತು.

10. ಸಂತವೇರಿ ಬಂಗಲೆಯನ್ನು 2ನೆ ಕ್ಲಾಸ್ ಬಂಗ್ಲೆಯನ್ನಾಗಿ ಮಾಡಬೇಕೆಂತಲೂ ಅದಕ್ಕೆ ತಕ್ಕ ಸಾಮಾನುಗಳಿಲ್ಲವನ್ನು ವದಗಿಸಬೇಕೆಂತಲೂ ಸಹಾ ಚೀಫ್ ಇಂಜಿನಿಯರು ಸದರಿ ಬಂಗಲೆಯನ್ನು ಇನ್‌ಸ್ಪೆಕ್ಷನ್ ಮಾಡಿದ ವೇಳೆ ಬರದ ಇನ್‌ಸ್ಪೆಕ್ಷನ್ ನೋಟ್ಸ್ ಎಕ್ಸ್‌ಟ್ರಾಕ್ಟು ಮೂಲಪೂಫಿಸಿ ಬಂದ 25—3—07ನೆ ಮಾರ್ಕ್ಕಂ 78ನೆ ನಂಬರು ತರೀಕೆರೆ ತಾಲ್ಲೂಕು ಅಮಲ್ದಾರ್‌ರವರ ರಿಪೋರ್ಟು ಓದಲಾಗಿ ಆ ರೀತಿ ಮಾಡಬಹುದೆಂತ ಬೋರ್ಡಿನಲ್ಲಿ ತೀರ್ಮಾನಿಸಲಾಯಿತು.

11. ಅಜ್ಜಂಪುರದಿಂದ ಬುಕ್ಕಾಂಬುಧಿಗೆ ರಸ್ತೆ ಮಾಡತಕ್ಕ ಬಗ್ಗೆ ಮೊದಲು ರಸ್ತೆ ಗುರ್ತಿಸತಕ್ಕ ಬಗ್ಗೆ ಸರ್ವೆ ಮಾಡತಕ್ಕ ಬಗ್ಗೆ 60 ರೂಪಾಯಿಗಳಿಗೆ ತಯಾರಾದ ಅಂದಾಜು ಮೂಲಪೂಫಿಸಿ ಬಂದ 15—4—07ನೆ ಮಾರ್ಕ್ಕಂ 99ನೆ ಡಾಕೆಟ್ ಓದಲಾಗಿ ಈ ಅಂದಾಜುವನ್ನು ಮಂಜೂರು ಮಾಡಬಹುದಾಗಿ ತೀರ್ಮಾನಿಸಲಾಯಿತು.

12. ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರು ಮೆ॥ ವಾಟರ್ಸ ಸಾಹೇಬರ ರಾಜೀನಾಮೆಯನ್ನು ಓದಲಾಗಿ ಸದರಿ ರಾಜೀನಾಮೆಯನ್ನು ಅಂಗೀಕರಿಸಬಹುದೆಂತಲೂ ಮೆ॥ ವಾಟರ್ಸ್‌ರವರಿಗೆ ಬದಲಾಗಿ ಮೆ॥ ಆಲಾರ್ಡಿಸ್ ಸಾಹೇಬರನ್ನು ಮೆಂಬರನ್ನಾಗಿ ಜಾಯಿನ್ ಮಾಡಿಸಬಹುದೆಂತ ತೀರ್ಮಾನಿಸಲಾಯಿತು.

13. ಭಾವೀಕೆರೆ ಭೂವಿಗೆ ಹೆಚ್ಚು ಕೆಲಸ ನಡದ ಬಗ್ಗೆ ತಯಾರಾಗಿ ಬಂದ 34 ರೂಪಾಯಿ ಅಂದಾಜುವನ್ನು ಓದಲಾಗಿ ಅಂದಾಜುವನ್ನು ಮಂಜೂರು ಮಾಡಬಹುದೆಂತ ತೀರ್ಮಾನಿಸಲಾಯಿತು.

14. ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು 1907ನೆ ಇಸವಿ ಜುಲೈ 30ನೆ ಮಂಗಳವಾರ ನಡಿಯಬೇಕೆಂತ ತೀರ್ಮಾನಿಸಲಾಯಿತು.

ಎಂ. ಲಕ್ಷ್ಮಣಶಾಸ್ತ್ರಿ,
ವೈಸ್ ಪ್ರೆಸಿಡೆಂಟ್.

ಚಿಕ್ಕಮಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ವ॥ 1906—07ನೆ ಇಸವಿ ಮಿ॥ ಅರ್ಜಿ ನಂಬರ್ 459.

ಚಿಕ್ಕಮಗಳೂರು ತಾಲ್ಲೂಕು ಮಳಲೂರು ಗ್ರಾಮದ ಕಾಡೈಯ್ಯನವರ ಮಗ ಪೆರ್ಸ್ ಸ್ಕೂಲ್ ಮಾಸ್ಟರ್ ಆಗಿ ಮೃತಪಟ್ಟ ವೆಂಕಪ್ಪಯ್ಯ ಎಂಬವರ ಚಿಕ್ಕಮಗಳೂರ್ ಪೋಸ್ಟಾಪೀಸು ಸೇವಿಂಗ್ಸ್ ಬ್ಯಾಂಕು ಬಾಬತ್ತು 200 ರೂಪಾಯಿಗಳು ಅದರ ಬಡ್ಡಿ ವಿಷಯದಲ್ಲಿ—

ಅರ್ಜಿದಾರರು ವೆಂಕಟರವಣಪ್ಪೈಯ್ಯನು ಮೃತಪಟ್ಟ ಸದರೀ ವೆಂಕಪ್ಪಯ್ಯ ಎಂಬವರಿಗೆ ಚಿಕ್ಕಪ್ಪನ ಮಗನು ಆಗಬೇಕೆಂಬ ಹಕ್ಕು ದಾರಿನೇಲೆ ಮಳಲೂರು ಸ್ಥಳದ ವೆಂಕಟರವಣಪ್ಪೈಯ್ಯ ಎಂಬುವರು ಮಳಲೂರು ವಾಸಸ್ಥರಾಗಿ ಮೃತಪಟ್ಟ ಸದರಿ ವೆಂಕಪ್ಪಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲಿಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರವಣಪ್ಪೈಯ್ಯನ ಅರ್ಜಿಯನ್ನು ಸ್ವ॥ 1907ನೆ ಇಸವಿ ಜುಲೈ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಚಾರ್ಕ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಪ್ಪಯ್ಯನೆಂಬುವರ ಆಸ್ತಿಗೆ ಹಕ್ಕು ದಾರರಾದ ವಿಷಯ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂಬ ಇದರಿಂದ ತಿಳಿಯಪಡಿಸಿ ಇದೆ.

ಸ್ವ॥ 1907ನೆ ಇಸವಿ ಜೂನ್ ತಿಂಗಳು 24ನೆ ತಾರೀಖಿನಲ್ಲಿ ಕೋರ್ಟ್ ಮೊಹರಿನಿಸಿ ನನ್ನಿಂದ ಸಹಿ ಹೊಡಿಸಿ ಕೊಡೋಣಾಗಿದೆ.

ಡಿ. ಎಂ. ನರಸಿಂಗರಾವ್,